ತ್ಯಾಗ

ಯರ್ಮೂಕ್ ಯುದ್ಧ ಮುಗಿದಿತ್ತು. ಪ್ರವಾದಿವರ್ಯರ(ಸ) ಸಂಗಾತಿ ಹುದೈಫಾ ಅದವೀ(ರ) ನೀರಿನ ಚೀಲ ಹಿಡಿದು ತಮ್ಮ ಸೋದರ ಪುತ್ರನನ್ನು ಹುತಾತ್ಮರ/ಗಾಯಾಳುಗಳೆಡೆಯಲ್ಲಿ ಹುಡುಕುತ್ತಿದ್ದರು. ಅವರು ಗಂಭೀರ ಗಾಯಗೊಂಡಿರುವ ಸ್ಥಿತಿಯಲ್ಲಿ ಸಿಕ್ಕಿದರು. ಹುದೈಫಾ(ರ) ಹತ್ತಿರ ಸಾಗಿ ನೀರು ಕುಡಿಯಲು ಹೇಳಿದರು. ಗಾಯಾಳು ಯೋಧ ಆಗಷ್ಟೇ ಬಾಯಾರಿಕೆಯನ್ನು ವ್ಯಕ್ತಪಡಿಸಿದ್ದರು. ಆದರೆ ಅಷ್ಟರಲ್ಲಿ ಇನ್ನೋರ್ವ ಗಾಯಾಳು ನರಳುತ್ತಿರುವುದು ಕೇಳಿಸಿತು. ಸೋದರ ಪುತ್ರನು ತನ್ನ ಚಿಕ್ಕಪ್ಪನೊಡನೆ, “ಆತನಿಗೆ ಮೊದಲು ನೀರು ಕುಡಿಸಿರಿ” ಎಂದರು. ಹುದೈಫಾ(ರ) ಆ ಗಾಯಾಳುವಿನ ಕಡೆಗೆ ಧಾವಿಸಿದರು. ಅಲ್ಲಿ ಹಿಶಾಮ್ ಬಿನ್ ಆಸ್(ರ) ಗಾಯಗಳಿಂದ ಜರ್ಝರಿತರಾಗಿ ಬಿದ್ದಿದ್ದರು. ಹುದೈಫಾ(ರ) ಹಿಶಾಮ್‌ರಿಗೆ(ರ) ನೀರು ಕುಡಿಸುವಷ್ಟರಲ್ಲಿ ಮತ್ತೋರ್ವ ವ್ಯಕ್ತಿಯ ನರಳಾಟ ಕೇಳಿಸಿತು. ಹಿಶಾಮ್(ರ) ಅತ್ತ ಕಡೆಗೆ ಸಂಜ್ಞೆ ಮಾಡಿದರು. ಹುದೈಫಾ(ರ) ಆ ಕಡೆಗೆ ಧಾವಿಸಿದರು. ಆದರೆ ಅವರು ಗಾಯಾಳುವಿನ ಬಳಿಗೆ ತಲುಪುವಷ್ಟರಲ್ಲಿ ಆತನ ಪ್ರಾಣ ಪಕ್ಷಿ ಹಾರಿ ಹೋಗಿತ್ತು. ಅವರು ಓಡೋಡಿ ಹಿಶಾಮ್‌ರ(ರ) ಬಳಿಗೆ ತಲುಪಿದರು. ಆದರೆ ಅವರೂ ಹುತಾತ್ಮರಾಗಿದ್ದರು. ಕೊನೆಗೆ ತಮ್ಮ ಸೋದರ ಪುತ್ರನ ಬಳಿಗೆ ಬಂದು ನೋಡಿದರೆ, ಅವರೂ ಕಣ್ಮುಚ್ಚಿದ್ದರು. ಈ ರೀತಿ ಪ್ರತಿಯೊಬ್ಬರೂ ತಮ್ಮ ಸಹೋದರನ ದಾಹ ತಣಿಸುವುದಕ್ಕಾಗಿ ಬಾಯಾರಿದ ಸ್ಥಿತಿಯಲ್ಲೇ ಹುತಾತ್ಮರಾದರು.

ಅದೇ ರೀತಿ ಇನ್ನೊಂದು ಸಂದರ್ಭದಲ್ಲಿ ಓರ್ವ ಸಹಾಬಿ ಸ್ತ್ರೀಯು(ರ) ಪ್ರವಾದಿವರ್ಯರಿಗೆ(ಸ) ಒಂದು ಚದ್ದರ ಉಡುಗೊರೆಯಾಗಿ ನೀಡಿದರು. ಪ್ರವಾದಿವರ್ಯರಿಗೆ(ಸ) ಚದ್ದರದ ಅಗತ್ಯ ಇತ್ತು. ಆದ್ದರಿಂದ ಅವರು ಆ ಉಡುಗೊರೆಯನ್ನು ಸ್ವೀಕರಿಸಿದರು ಮತ್ತು ಅದನ್ನು ಹೊದ್ದುಕೊಂಡರು. ಓರ್ವ ಸಹಾಬಿ ಇದನ್ನೆಲ್ಲ ನೋಡುತ್ತಿದ್ದರು. ಅವರು ಪ್ರವಾದಿವರ್ಯರೊಡನೆ(ಸ) ಹೇಳಿದರು, “ಚದ್ದರ ಬಹಳ ಸುಂದರವಾಗಿದೆ. ನನ್ನ ಮೇಲೆ ಕೃಪೆ ತೋರುವಿರಾ?” ಪ್ರವಾದಿವರ್ಯರು(ಸ) ಎಲ್ಲಾದರೂ ಯಾಚಕರ ಬೇಡಿಕೆಯನ್ನು ರದ್ದುಗೊಳಿಸಿದ್ದುಂಟೇ? ಚದ್ದರವನ್ನು ಬಿಚ್ಚಿ ಆ ಸಹಾಬಿಗೆ ನೀಡಿದರು.

ಈಗ ಆ ಸಹಾಬಿಯನ್ನು ಇತರ ಸಹಾಬಿಗಳು ಮುತ್ತಿಕೊಂಡರು ಮತ್ತು ಹೀಗೆ ಜರೆಯತೊಡಗಿದರು, “ಬಹಳ ಒಳ್ಳೆಯ ಕೆಲಸ ಮಾಡಿದೆ. ಅಲ್ಲಾಹನ ಸಂದೇಶವಾಹಕರಿಗೆ(ಸ) ಚದ್ದರದ ಅಗತ್ಯ ಇತ್ತು ಎಂಬುದು ನಿನಗೂ ತಿಳಿದಿತ್ತಲ್ಲ. ಅಲ್ಲಾಹನ ಸಂದೇಶವಾಹಕರು(ಸ) ಯಾವ ಯಾಚಕನನ್ನೂ ಬರಿ ಕೈಯಲ್ಲಿ ಮರಳಿಸುವುದಿಲ್ಲ ಎಂಬುದೂ ನಿನಗೆ ತಿಳಿದಿತ್ತು. ಆದಾಗಿಯೂ ನೀನು ಈ ಕೃತ್ಯವನ್ನೆಸಗಿದೆಯಲ್ಲ.” ಆ ಸಹಾಬಿಯು ಗಾಬರಿಗೊಂಡು ಹೀಗೆ ಉತ್ತರಿಸಿದರು, “ಅಲ್ಲಾಹನಾಣೆ! ನಾನು ಇದನ್ನು ಧರಿಸಬೇಕೆಂಬ ಉದ್ದೇಶದಿಂದ ಅಲ್ಲಾಹನ ಸಂದೇಶವಾಹಕರೊಡನೆ(ಸ) ಕೇಳಿದ್ದಲ್ಲ. ಬದಲಾಗಿ ಅವರ(ಸ) ದೇಹ ಸ್ಪರ್ಶ ಪಡೆದಂತಹ ಬಟ್ಟೆಯೇ ನನ್ನ ಕಫನ್ ಆಗಲಿ ಎಂಬುದಷ್ಟೇ ನನ್ನ ಆಗ್ರಹವಾಗಿತ್ತು.” ಹಾಗೆಯೇ ನಡೆಯಿತು ಕೂಡ. (ಬುಖಾರಿ)
ಅವರು ಆ ಚದ್ದರವನ್ನು ಜೋಪಾನವಾಗಿ ಇರಿಸಿದ್ದರು ಮತ್ತು ಅದೇ ಚದ್ದರವನ್ನು ಅವರ ಕಫನ್‌ಗೆ ಬಳಸಲಾಯಿತು.

ಒಮ್ಮೆ ಪ್ರವಾದಿವರ್ಯರು(ಸ) ಮಸೀದಿಯಲ್ಲಿ ಕುಳಿತಿದ್ದರು. ಓರ್ವ ವ್ಯಕ್ತಿ ಅಲ್ಲಿಗೆ ಆಗಮಿಸಿದರು. ಆತ ಹಸಿದಿದ್ದಾನೆ ಎಂದು ಅರಿವಾದಾಗ ಪ್ರವಾದಿವರ್ಯರು(ಸ) ತಮ್ಮ ಮನೆಯವರೊಡನೆ ತಿನ್ನಲಿಕ್ಕೇನಿದೆ ಎಂದು ಕೇಳಿದರು. ನೀರಿನ ಹೊರತು ಬೇರೇನೂ ಇಲ್ಲ ಎಂಬ ಉತ್ತರ ಬಂತು. ಪ್ರವಾದಿವರ್ಯರು(ಸ) ಸಹಾಬಿಗಳನ್ನು ಉದ್ದೇಶಿಸಿ ಕೇಳಿದರು, “ಇವತ್ತು ರಾತ್ರಿ ಈ ಅತಿಥಿಯನ್ನು ಯಾರು ಸತ್ಕರಿಸುವರು?” ಓರ್ವ ಅನ್ಸಾರಿ ಹೇಳಿದರು, “ಯಾ ರಸೂಲಲ್ಲಾಹ್(ಸ), ನಾನಿದ್ದೇನೆ.” ಹೀಗೆ ಅವರು ಅತಿಥಿಯನ್ನು ಕರಕೊಂಡು ಮನೆಗೆ ಹೋದರು. ಪತ್ನಿಗೆ ಎಲ್ಲ ಸಂಗತಿ ತಿಳಿಸಿದರು. ಅಲ್ಲಿಯೂ ಮಕ್ಕಳಿಗೆ ಇರುವಷ್ಟು ಮಾತ್ರ ಆಹಾರ ಉಳಿದಿತ್ತು. ಸತಿಪತಿಗಳಿಬ್ಬರೂ ಒಂದು ಉಪಾಯವನ್ನು ಹೂಡಿದರು. ಮಕ್ಕಳನ್ನು ಸಮಾಧಾನಿಸಿ ಮಲಗಿಸುವುದು, ಬಳಿಕ ಮಕ್ಕಳಿಗಾಗಿರಿಸಿದ ಅಲ್ಪ ಆಹಾರವನ್ನು ಅತಿಥಿಯ ಮುಂದಿರಿಸುವುದು, ಬಳಿಕ ಅತಿಥಿಯ ಬಳಿ ಸಹಾಬಿಯೂ ಕುಳಿತುಕೊಳ್ಳುವುದು; ಆಹಾರವು ಕೇವಲ ಒಬ್ಬ ವ್ಯಕ್ತಿಗೆ ಸಾಕಾಗುವಷ್ಟು ಇದ್ದ

ಕಾರಣ ದೀಪವನ್ನು ಆರಿಸುವುದು, ಆತಿಥೇಯನು ತಾನೂ ತಿನ್ನುತ್ತಿದ್ದೇನೆ ಎಂದು ನಟಿಸುವುದು, ಈ ಪ್ರಕಾರ ಅತಿಥಿಯು ಹೊಟ್ಟೆ ತುಂಬಾ ತಿನ್ನುವನು ಮತ್ತು ಕತ್ತಲೆ ಇದ್ದ ಕಾರಣ ಆತಿಥೇಯನು ಹಸಿದಿದ್ದ ಎಂಬುದು ಅತಿಥಿಗೆ ತಿಳಿಯಲಾರದು ಎಂಬುದಾಗಿತ್ತು ಆ ಉಪಾಯ. ಹಾಗೆಯೇ ನಡೆಯಿತು. ಬೆಳಿಗ್ಗೆ ಆ ಅನ್ಸಾರಿ ಸಹಾಬಿಯು ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಹಾಜರಾದಾಗ, ಪ್ರವಾದಿವರ್ಯರು(ಸ) ಹೀಗೆ ಹೇಳಿದರು, "ನಿಮ್ಮಿಬ್ಬರ ಅತಿಥಿ ಸತ್ಕಾರದಿಂದ ಅಲ್ಲಾಹ್ ಸಂತುಷ್ಟಗೊಂಡನು." (ಮುಸ್ಲಿಮ್)

ಅದೇ ಹಿನ್ನೆಲೆಯಲ್ಲಿ ಈ ವಚನವು ಅವತೀರ್ಣಗೊಂಡಿತು,

﴿وَيُؤْثِرُونَ عَلَىٰٓ أَنفُسِهِمْ وَلَوْ كَانَ بِهِمْ خَصَاصَةٌۚ وَمَن يُوقَ شُحَّ نَفْسِهِۦ فَأُوْلَٰٓئِكَ هُمُ ٱلْمُفْلِحُونَ ٩﴾
الحشر: ٩

"ಇವರು ಸ್ವತಃ ತಮಗೆ ಅಗತ್ಯವಿದ್ದರೂ ಇತರರಿಗೆ ತಮ್ಮ ಮೇಲೆ ಪ್ರಾಶಸ್ತ್ಯ ನೀಡುತ್ತಾರೆ." (ಪವಿತ್ರ ಕುರ್‌ಆನ್: 59: 9)

ಅಬುಲ್ ಹಸನ್ ಅನ್ತಾ ಎಂಬೋರ್ವರು ಪ್ರಸಿದ್ಧ ವ್ಯಕ್ತಿ ಇದ್ದರು. ಒಮ್ಮೆ ಅವರ ಬಳಿಗೆ ಮುವ್ವತ್ತು ಮಂದಿ ಒಟ್ಟಿಗೇ ಅತಿಥಿಗಳಾಗಿ ಬಂದರು. ಅಷ್ಟೊಂದು ಜನರಿಗೆ ಸಾಕಾಗುವಷ್ಟು ರೊಟ್ಟಿಯು ಅವರ ಬಳಿ ಇರಲಿಲ್ಲ. ಹಾಗಾಗಿ ರೊಟ್ಟಿಗಳನ್ನು ತುಂಡು ಮಾಡಿ ಊಟದ ಹಾಸಿನಲ್ಲಿ ಬಡಿಸಲಾಯಿತು ಮತ್ತು ಎಲ್ಲರೂ ಊಟದ ಹಾಸಿನಲ್ಲಿ ಆಸೀನರಾದಾಗ ದೀಪವನ್ನು ಆರಿಸಲಾಯಿತು. ಬಳಿಕ ಊಟದ ಹಾಸನ್ನು ಎತ್ತಲಾದಾಗ ರೊಟ್ಟಿಗಳು ಇದ್ದ ಹಾಗೆಯೇ ಉಳಿದಿದ್ದುವು. ಅಂದರೆ ಪ್ರತಿಯೊಬ್ಬರೂ ಇತರರು ಹೊಟ್ಟೆ ತುಂಬಾ ತಿನ್ನಲಿ ಎಂದು ಸ್ವತಃ ತಿಂದಿರಲಿಲ್ಲ. ಎಲ್ಲರೂ ಹೀಗೆ ಮಾಡಿದ್ದರ ಪರಿಣಾಮವಾಗಿ ಎಲ್ಲ ರೊಟ್ಟಿಗಳೂ ಉಳಿದು ಬಿಟ್ಟಿದ್ದವು.

ಇದು ಇಸ್ಲಾಮ್ ರೂಪಿಸಲಿಚ್ಛಿಸುವ ಸಮಾಜದ ಒಂದು ದೃಶ್ಯವಾಗಿದೆ. ಇಸ್ಲಾಮ್ ಮಾನವನ ಚಾರಿತ್ರ್ಯವನ್ನು ಎಂತಹ ಅಚ್ಚಿನಲ್ಲಿ ಎರಕ ಹೊಯ್ಯುತ್ತದೆ ಎಂದರೆ, ಮಾನವನು ತ್ಯಾಗ-ಬಲಿದಾನಗಳ ಪುತ್ಥಳಿಯಾಗಿ ಬಿಡುತ್ತಾನೆ. ಅದು ಮಾನವನನ್ನು ಇತರ ಮಾನವರಿಗಾಗಿ ಬದುಕುವುದನ್ನು ಇಷ್ಟ ಪಡುವಂತಹ ಪ್ರಜ್ಞೆಯ ಹಂತಕ್ಕೆ ಕೊಂಡೊಯ್ಯುತ್ತದೆ. ಹೀಗೆ ಯಾವುದಕ್ಕಾಗಿ ಜನರು ಜಗಳಾಡುತ್ತಾರೋ ಮತ್ತು ಅದಕ್ಕಾಗಿ ಎಂತಹ ಹೇಯ ಕೃತ್ಯವನ್ನು ಎಸಗಲೂ ಹೇಸುವುದಿಲ್ಲವೋ ಅಂತಹ ಜಗತ್ತನ್ನು ಆ ತ್ಯಾಗಿಯು ಗಣನೆಗೆ ತೆಗೆದುಕೊಳ್ಳುವುದಿಲ್ಲ ಹಾಗೂ ಇತರರಿಗಾಗಿ ಅದನ್ನು ತ್ಯಜಿಸಲೂ ಸಿದ್ಧನಾಗುತ್ತಾನೆ. ತನ್ನ ಅಗತ್ಯಗಳನ್ನು ಬದಿಗಿರಿಸಿ ಇತರರ ಆಗ್ರಹಗಳನ್ನು ಪೂರೈಸಲು ಶ್ರಮಿಸುತ್ತಾನೆ. ಸ್ವತಃ ಹಸಿದು ಬಾಯಾರಿದ್ದರೂ ಇತರರ ಹಸಿವು, ದಾಹವನ್ನು ತಣಿಸುತ್ತಾನೆ. ಇದು ಮಾನವೇತಿಹಾಸವನ್ನು ಬೆಳಗಿಸಿದಂತಹ ಇಸ್ಲಾಮೀ ಶಿಕ್ಷಣದ ಪ್ರಕಾಶವಾಗಿದೆ. ಸಹೋದರತೆ, ಪ್ರೀತಿ, ತ್ಯಾಗ-ಬಲಿದಾನಗಳ ಸುಗಂಧದಲ್ಲಿ ಇಸ್ಲಾಮೀ ಸಮಾಜವು ಸದಾ ಘಮಘಮಿಸುತ್ತಿರುವುದು. ಅಲ್ಲಾಹನ ಸಂದೇಶವಾಹಕರು(ಸ) ಹೀಗೆಂದಿದ್ದಾರೆ,

لا يومن أحدكم حتى يحب لأخيه ما يحب لنفسه

"ತನಗಾಗಿ ಇಷ್ಟಪಡುವುದನ್ನು ತನ್ನ ಸಹೋದರನಿಗಾಗಿಯೂ ಇಷ್ಟಪಡುವ ವರೆಗೂ ನಿಮ್ಮ ಪೈಕಿ ಯಾರೂ ವಿಶ್ವಾಸಿಯಾಗಲಾರ." (ಮುತ್ತಫಕ್ ಅಲೈಹಿ)

ಉಮ್ಮುಲ್ ಮೂಮಿನೀನ್ ಆಯಿಶಾ ಸಿದ್ದೀಕಾ(ರ) ಹೇಳುತ್ತಾರೆ, "ಅಲ್ಲಾಹನ ಸಂದೇಶವಾಹಕರು(ಸ) ನಿರಂತರ ಮೂರು ದಿನ ಹೊಟ್ಟೆ ತುಂಬಾ ಆಹಾರ ಸೇವಿಸಿದಂತಹ ಸಂದರ್ಭ ಬಂದಿರಲೇ ಇಲ್ಲ. ನಾವು ಬಯಸುತ್ತಿದ್ದರೆ ಸೇವಿಸುತ್ತಿದ್ದೆವು. ಆದರೆ ನಾವು ಸದಾ ನಮಗಿಂತ ಇತರರಿಗೆ ಪ್ರಾಶಸ್ತ್ಯ ನೀಡುತ್ತಿದ್ದೆವು."

ಇವು ತ್ಯಾಗ-ಬಲಿದಾನಕ್ಕೆ ಸಂಬಂಧಿಸಿದ ಇಸ್ಲಾಮೀ ಶಿಕ್ಷಣವಾಗಿದೆ ಮತ್ತು ಅದರ ಪಾಲನೆಯ ಕೆಲವು ಐತಿಹಾಸಿಕ ಘಟನೆಗಳಾಗಿವೆ. ಇಂದು ಇಸ್ಲಾಮಿನೊಂದಿಗೆ ಅತ್ಯುತ್ತಮ ಸಂಬಂಧವನ್ನು ಹೊಂದಿರುವುದಾಗಿ ವಾದಿಸುವವರು ತಮ್ಮ ರೂಪವನ್ನು ಈ ಕನ್ನಡಿಯಲ್ಲಿ ನೋಡುವ ಧೈರ್ಯ ತೋರಿಯಾರೇ?

* * * * *

www.uzairfalahi.com